ಶ್ರೀ ಗೋವಿಂದಪ್ಪ ಎಂ ಕಾರಜೋಳ್ :- ನಮ್ಮ ಅವಧಿಯಲ್ಲಿ ಕೊನೆಯ ದಿವಸಗಳಲ್ಲೂ ಹೀಗೆ ಆಗಿರಲಿಲ್ಲ. ಈಗ ಮೊದಲನೇ ಅಧಿವೇಶನದಲ್ಲೇ ಈ ಪರಿಸ್ಥಿತಿ ಆದರೆ ಹೇಗೆ?

(ಗೊಂದಲ)

ಅಧ್ಯಕ್ಷರು :- ಮಾನ್ಯ ಕಾನೂನು ಸಚಿವರೇ, ದಯವಿಟ್ಟು ಪ್ರಸ್ತಾವವನ್ನು ಮಂಡಿಸಿ.

7. **ಪ್ರಸ್ತಾವ**

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ದಿನಾಂಕ 04.06.2013ರಂದು ವಿಧಾನ ಸಭೆ ಸಮಿತಿಗಳನ್ನು ರಚಿಸಲು ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ವಿಧಾನ ಸಭೆಯ ವಿವಿಧ ಸಮಿತಿಗಳಿಗೆ ಮಾನ್ಯ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಮಾನ್ಯ ಕಾನೂನು ಸಚಿವರು ಮಂಡಿಸಿರುವ ಪ್ರಸ್ತಾವಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ.

(ಪ್ರಸ್ತಾವವನ್ನು ಸದನವು ಅಂಗೀಕರಿಸಿತು ಮತ್ತು ವಿಧಾನಸಭೆಯ ವಿವಿಧ ಸಮಿತಿಗಳಿಗೆ ಮಾನ್ಯ ಸದಸ್ಯರನ್ನು

ನಾಮ ನಿರ್ದೇಶನ ಮಾಡಲು ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಿತು)

ಅಧ್ಯಕ್ಷರು :- ಈಗ ಮಾನ್ಯ ರಮೇಶ್ ಕುಮಾರ್‌ರವರು ತಮ್ಮ ಭಾಷಣವನ್ನು ಮುಂದುವರೆಸಬೇಕು.

ಶ್ರೀ ಡಿ.ಎನ್.ಜೀವರಾಜ್ :- ಸರ್, ನನಗಂತೂ ಬಹಳ ಪಾಪ ಎನಿಸುತ್ತಿದೆ!

ಅಧ್ಯಕ್ಷರು :- ಯಾಕ್ರೀ?

ಶ್ರೀ ಡಿ.ಎನ್.ಜೀವರಾಜ್ :– ಮಾನ್ಯ ರಮೇಶ್ ಕುಮಾರ್ ಅಂತಹವರ ಭಾಷಣ ಕೇಳಲಿಕ್ಕೂ ಯಾರೂ ಇಲ್ಲವಲ್ಲಾ?

ಅಧ್ಯಕ್ಷರು :–ತಾವುಗಳು ಇದ್ದರೆ ಸಾಕು ಬಿಡಿ!

ಶ್ರೀ ಕೆ.ಆರ್.ರಮೇಶ್ ಕುಮಾರ್ :– ಮಾನ್ಯ ಜೀವರಾಜ್‌ರವರೆ, ನಾನು ಮತ್ತು ನೀವು ಮಾತನಾಡುವುದೆಲ್ಲವೂ record ಆಗುತ್ತದೆ. ಯಾರನ್ನೋ ಮೆಚ್ಚಿಸಲಿಕ್ಕೆ. Certificate ತೆಗೆದುಕೊಳ್ಳಲಿಕ್ಕೆ ಮಾತನಾಡುವ stage ಅನ್ನು ನಾನು ದಾಟಿ ಬಿಟ್ಟಿದ್ದೇನೆ. ಇಲ್ಲಿ ಒಳಗೆ ಬರುವುದೇ ನಮ್ಮ ಪುಣ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಒಳಗೆ ಬಂದಾಗ ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ.

ಶ್ರೀ ಡಿ.ಎನ್.ಜೀವರಾಜ್ :– ತಮ್ಮ ಸಲಹೆಗಳನ್ನು ಸರ್ಕಾರ ಕೇಳಿದ್ದರೆ, ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಾಗುತ್ತಿತ್ತು.

ಅಧ್ಯಕ್ಷರು :– ಕೇಳುತ್ತಾರೆ ಬಿಡಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ :– ಮುಂದೆ ಯಾವಾಗಲಾದರೂ ಒಂದು ದಿವಸ ನೀವು ಮತ್ತೆ ಬರುತ್ತೀರಲ್ಲಾ? ಈಗ ತಿಳಿದುಕೊಂಡಿರಿ, ಮುಂದೆ ನಿಮಗೆ ಅನುಕೂಲವಾಗುತ್ತದೆ. ಅವರಿಗೆ ಬೇಕಾಗಿಲ್ಲವೆಂದರೆ, ನೀವಾದರೂ ತಿಳಿದುಕೊಂಡಿರಿ.

8. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ

ಶ್ರೀ ಕೆ.ಆರ್.ರಮೇಶ್ ಕುಮಾರ್ (ಶ್ರೀನಿವಾಸಪುರ) :– ಮಾನ್ಯ ಅಧ್ಯಕ್ಷರೆ, ನಾನು ಈಗ ಇಲ್ಲಿರಬೇಕಾದರೆ ಗೆಳೆಯರಾದ ಮಾನ್ಯ ಗೋವಿಂದ ಕಾರಜೋಳ್‌ರವರು ನನಗೊಂದು paperಕೊಟ್ಟರು. Proposed draft. The Karnataka Scheduled Caste Sub-Plan Tribal Sub-PLAN Planning allocation and utilization of financial resources Bill,–2013 ಎಂಬ ಪೇಪರ್ ಅನ್ನು ಅವರು ನನಗೆ ಕೊಟ್ಟರು. ಅಂದರೆ, ನಮ್ಮ ಲಾ ಮಿನಿಸ್ಟರ್ ಕೆಲಸ ಸುಲಭವಾಯಿತು. ನಾನು ಯಾವ ವಿಚಾರವನ್ನು ಪ್ರಸ್ತಾಪಿಸಿ ಮಾತನಾಡುತ್ತಿದ್ದೆನೋ, ಅದಕ್ಕೆ ಇದು ಸಂಬಂಧಿಸಿದೆ. ದಯಮಾಡಿ ಇದನ್ನು ಮುಂದುವರೆಸಬೇಕು. ಆದಷ್ಟು ಬೇಗ ಈ ಶಾಸನ ಸಭೆ,